**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಡೂರು**

**ಸಿ.ಸಿ. 4226/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಮಂಜುನಾಥ್ ಜಿ. | ಚಾಸಾ.1 |
| ತಂದೆಯ ಹೆಸರು | : | ರುದ್ರಪ್ಪ | ಫ್ರಾಸಾ.1 |
| ವಯಸ್ಸು | : | 35 ವರ್ಷ | |
| ವೃತ್ತಿ | : | ಪಿಎಸ್.ಐ. | |
| ವಾಸಸ್ಥಳ | : | ಯಗಟಿ | |

**ದಿನಾಂಕ 27.06.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ :ಮಾನ್ಯ ಎ.ಪಿ.ಪಿ. ರವರಿಂದ :-**

ನಾನು ದಿನಾಂಕ 11.07.2024 ರಿಂದ ಇಲ್ಲಿಯವರೆಗು ಯಗಟಿ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿನಾಂಕ 03.09.2024 ರಂದು ರಾತ್ರಿ 7.45 ಗಂಟೆ ಸಮಯದಲ್ಲಿ ಯಗಟಿ ಮತ್ತು ಯಗಟಿಪುರದ ಕಡೆ ಇಲಾಖಾ ಜೀಪಿನಲ್ಲಿ ನನ್ನ ಸಿಬ್ಬಂದಿಗಳಾದ ಚಾಸಾ-4 ಮತ್ತು 5 ರವರೊಂದಿಗೆ ಗಸ್ತಿನಲ್ಲಿ ಇದ್ದಾಗ ಯಾರೋ ಪೊಲೀಸ್ ಬಾತ್ಮಿದಾರರು ನನಗೆ ಫೋನ್ ಕರೆ ಮಾಡಿ ಯಗಟಿಯ ಸಂತೆ ಮೈದಾನದ ಹತ್ತಿರ ಹರಿಸಮುದ್ರದ ಕಡೆ ಹೋಗುವ ರಸ್ತೆಯಲ್ಲಿ ಯಾರೋ ಒಬ್ಬ ಆಸಾಮಿ ಅಕ್ರಮವಾಗಿ ಮದ್ಯ ಮಾರಾಟ ಮಾಡುವ ಉದ್ದೇಶದಿಂದ ತೆಗೆದುಕೊಂಡು ಹೋಗುತ್ತಿದಾಗ ಎಂದು ಮಾಹಿತಿ ತಿಳಿಸಿರುತ್ತಾರೆ. ಸದರಿ ವಿಚಾರವನ್ನು ನನ್ನ ಸಿಬ್ಬಂದಿಗಳಿಗೆ ತಿಳಿಸಿ ನನ್ನೊಂದಿಗೆ ಇಲಾಖಾ ಜೀಪಿನಲ್ಲಿ ಕರೆದುಕೊಂಡು ಸರ್ಚ್ ವಾರೆಂಟನ್ನು ಪಡೆಯಲು ಸಾಕಷ್ಟು ಕಾಲಾವಕಾಶ ಇಲ್ಲದೆ ಇದ್ದುದ್ದರಿಂದ ಆರೋಪಿಯು ತಲೆಮರೆಸಿಕೊಳ್ಳುತ್ತಾನೆ ಎಂದು ಅಬಕಾರಿ ಕಾಯ್ದೆ ಕಲಂ.54 ರಡಿಯಲ್ಲಿ ಅಧಿಕಾರವನ್ನು ಚಲಾಯಿಸಿ ಘಟನಾ ಸ್ಥಳಕ್ಕೆ ಇಲಾಖಾ ಜೀಪಿನಲ್ಲಿ ಹೋಗುತ್ತಿರುವಾಗ ಯಗಟಿ ಸಂತೆ ಮೈದಾನದ ಸೇತುವೆ ಬಳಿ ಮಾತನಾಡುತ್ತಾ ಕುಳಿತ್ತಿದ್ದ ಇಬ್ಬರು ವ್ಯಕ್ತಿಗಳನ್ನು

ಪರಿಚಯ ಮಾಡಿಕೊಂಡು ದಾಳಿಯ ಬಗ್ಗೆ ತಿಳಿಸಿ ಸದರಿಯವರು ಒಪ್ಪಿಕೊಂಡ ಮೇರೆಗೆ ನೋಟೀಸನ್ನು ಜಾರಿ ಮಾಡಿರುತ್ತೇನೆ. ಸಾಕ್ಷಿಯು ನೋಟೀಸನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.1 ಎಂದು ಅದರಲ್ಲಿರುವ ತನ್ನ ಸಹಿಯನ್ನು ನಿಪಿ.1ಎ ಎಂದು ಗುರುತಿಸಲಾಯಿತು.

ನಂತರ ಪಂಚರನ್ನು ನನ್ನ ಇಲಾಖಾ ಜೀಪಿನಲ್ಲಿ ಕರೆದುಕೊಂಡು ಘಟನಾ ಸ್ಥಳಕ್ಕೆ ರಾತ್ರಿ 8.00 ಗಂಟೆಗೆ ಹೋಗಿ ನೋಡಿದಾಗ ಒಬ್ಬ ಆಸಾಮಿಯು ರಸ್ತೆ ಬದಿಯಲ್ಲಿ ಸಂತೆ ಮೈದಾನದಿಂದ ಹರಿಸಮುದ್ರದ ಕಡೆಗೆ ಹೋಗುತ್ತಿದ್ದು ಆಸಾಮಿಯು ನಮ್ಮನ್ನು ಮತ್ತು ಇಲಾಖಾ ಜೀಪನ್ನು ನೋಡಿ ಓಡಿಹೋಗಲು ಪ್ರಯತ್ನಿಸಿದ್ದು ನನ್ನ ಸಿಬ್ಬಂದಿಗಳು ಆತನನ್ನು ಹಿಡಿದು ತಂದು ಹೆಸರು ವಿಳಾಸ ಕೇಳಲಾಗಿ, ಆತ ತನ್ನ ಹೆಸರು ರಂಗನಾಥ ಬಿನ್ ತಿಮ್ಮಪ್ಪ, ಯರದಕೆರೆ ಗ್ರಾಮ ಎಂದು ತಿಳಿಸಿರುತ್ತಾನೆ. ಆತನ ಬಳಿ ಇದ್ದ ಆಕಾಶ ನೀಲಿ ಬಣ್ಣದ ಪ್ಲಾಸ್ಟಿಕ್ ಚೀಲದಲ್ಲಿದ್ದ ಮದ್ಯದ ಬಗ್ಗೆ ವಿಚಾರಿಸಲಾಗಿ, ಆತನು ಹೆಚ್ಚಿನ ಬೆಲೆ ಸಾರ್ವಜನಿಕರಿಗೆ ಮದ್ಯವನ್ನು ಮಾರಾಟ ಮಾಡಲು ತೆಗೆದುಕೊಂಡು ಹೋಗುತ್ತಿರುವುದಾಗಿ ತಿಳಿಸಿರುತ್ತಾನೆ. ಆಸಾಮಿಗೆ ಸದರಿ ಮದ್ಯವನ್ನು ಸಾಗಾಣಿಕೆ ಮಾಡಲು ತನ್ನ ಬಳಿ ಪರವಾನಿಗೆ ಇದೆಯೇ ಎಂದು ಕೇಳಲಾಗಿ ಆತನು ತನ್ನ ಬಳಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಆಸಾಮಿಯ ಬಳಿ ಇದ್ದ ಪ್ಲಾಸ್ಟಿಕ್ ಚೀಲವನ್ನು ಪಂಚರ ಸಮಕ್ಷಮ ಪರಿಶೀಲಿಸಿ ನೋಡಲಾಗಿ, 90 ಎಂ.ಎಲ್.ನ 30 ಮದ್ಯದ ತುಂಬಿದ ರಾಜಾವಿಸ್ಕಿ ಎಂದು ಬರೆದಿರುವ ಪ್ಯಾಕೇಟುಗಳು ಇರುವುದು ಕಂಡುಬಂದಿರುತ್ತದೆ. ಪಂಚರು ಸದರಿ ಮದ್ಯದ ಅಂದಾಜು ಬೆಲೆ ರೂ.1,199/- ಎಂದು ಅಂದಾಜಿಸಿರುತ್ತಾರೆ. ನಂತರ ಸ್ಥಳದಲ್ಲಿಯಲ್ಲಿಯೇ ವರದಿಯನ್ನು ನನ್ನ ಸಿಬ್ಬಂದಿಯಾದ ಚಾಸಾ-4 ರವರ ಮೂಲಕ ತಯಾರಿಸಿ ಪ್ರ.ವ.ವರದಿಯನ್ನು ದಾಖಲಿಸಿಕೊಂಡು ಬರುವಂತೆ ಚಾಸಾ-4 ರವರ ಹಸ್ತ ಕೊಟ್ಟು ಕಳುಹಿಸಿರುತ್ತೇನೆ. ನಂತರ ನನಗೆ ಫೋನ್ ಮೂಲಕ ನನ್ನ ಠಾಣಾ ಪ್ರಭಾರದಲ್ಲಿ ಇದ್ದ ಎಸ್.ಹೆಚ್.ಓ.ರವರು ಪ್ರ.ವ.ವರದಿ ದಾಖಲಾಗಿದೆ ಎಂದು ತಿಳಿಸಿದ ನಂತರ ಆಸಾಮಿ ಬಳಿ ಇದ್ದ ಮದ್ಯದ ತುಂಬಿದ ಪೌಚುಗಳನ್ನು ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮೆಯನ್ನು ರಾತ್ರಿ 9.10 ಗಂಟೆ ರಿಂದ 9.45 ಗಂಟೆಯವರೆಗು ಮಹಜರು ಕ್ರಮ ಜರುಗಿಸಿ, ಛಾಯಾಚಿತ್ರವನ್ನು ತೆಗೆಸಿ ಅದೇ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಬಾಯಿಯನ್ನು ಹೊಲೆದು 'ಆರ್.' ಎಂಬ ಅಕ್ಷರದಿಂದ ಸೀಲು ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ ಹಾಗೂ ನನ್ನ

ಹಾಗೂ ಪಂಚರಾದ ಚಾಸಾ-2 ಮತ್ತು 3 ರವರ ಸಹಿ ಇರುವ ಚೀಟಿಯನ್ನು ಸದರಿ ಮುದ್ದೆ ಮಾಲಿನ ಮೇಲೆ ಅಂಟಿಸಿರುತ್ತೇನೆ. ಸಾಕ್ಷಿಯು ವರದಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.2 ಎಂದು ಅದರಲ್ಲಿರುವ ತನ್ನ ಸಹಿಯನ್ನು ನಿಪಿ.2 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.3 ಎಂದು ಅದರಲ್ಲಿರುವ ತನ್ನ ಸಹಿಯನ್ನು ನಿಪಿ.3 ಎ ಎಂದು ಗುರುತಿಸಲಾಯಿತು. ಸಾಕ್ಷಿಯು ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.4 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುದ್ದೆಮಾಲನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ-1 ಎಂದು ಅದರಲ್ಲಿರುವ ತನ್ನ ಸಹಿಯನ್ನು ಮು.ಮಾ-1 ಎ ಎಂದು ಗುರುತಿಸಲಾಯಿತು.

ನಂತರ ಆರೋಪಿಗೆ ಸ್ಥಳದಲ್ಲಿಯೇ ಕಲಂ.35(3) ಬಿ.ಎನ್.ಎಸ್.ಎಸ್. ರಡಿಯಲ್ಲಿ ನೋಟೀಸನ್ನು ಜಾರಿ ಮಾಡಿ ಬಿಡುಗಡೆ ಮಾಡಿರುತ್ತೇನೆ. ಸಾಕ್ಷಿಯು ಸದರಿ ನೋಟೀಸನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.5 ಎಂದು ಅದರಲ್ಲಿರುವ ತನ್ನ ಸಹಿಯನ್ನು ನಿಪಿ.5 ಎ ಎಂದು ಗುರುತಿಸಲಾಯಿತು. ನಂತರ ವಶಪಡಿಸಿಕೊಂಡ ಮುದ್ದೆಮಾಲನ್ನು ಠಾಣೆಗೆ ತಂದು ಎಸ್.ಹೆಚ್.ಓ. ಮುಂದೆ ಹಾಜರುಪಡಿಸಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು :- ಆರೋಪಿ ಪರ ಶ್ರೀ ಎಸ್.ಎನ್.ಎ. ವಕೀಲರಿಂದಃ-**

ನಾನು ಸದರಿ ದಿನದಂದು ಯಗಟಿಯಲ್ಲಿ ಗಸ್ತು ಮಾಡುವ ಮೊದಲು ಹಿರೆಗರರ್ಜೆ, ಕೋಡಿಹಳ್ಳಿ, ರಾಮಪುರದಲ್ಲಿ ಗಸ್ತು ನಡೆಸಿರುತ್ತೇನೆ. ಕೊನೆಯದಾಗಿ ಪುರದಲ್ಲಿ ನಾನು ಗಸ್ತು ಮಾಡಿರುತ್ತೇನೆ, ನಂತರ ಯಗಟಿಗೆ ಬಂದಿರುತ್ತೇನೆ. ಸದರಿ ವಿಚಾರಗಳನ್ನು ನನ್ನ ಠಾಣಾ ದಿನಚರಿಯಲ್ಲಿ ನಮೂದಿಸಿರುತ್ತೇನೆ. ಮುದ್ದೆಮಾಲಿನ ಮೇಲೆ ಚೀಟಿಯನ್ನು ಅದೇ ದಿನದಂದು ಅಂಟಿಸಿರುತ್ತೇನೆ. ಮು.ಮಾ-1 ರ ಮೇಲಿರುವ ಚೀಟಿಯಲ್ಲಿ ಮದ್ಯವು ಯಾವ ದಿನದಂದು ತಯಾರಿಸಲಾಗಿದೆ ಮತ್ತು ಅಂತಿಮ ದಿನವನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ಸದರಿ ಮು,ಮಾ-1 ರ ಮೇಲಿರುವ ಚೀಟಿಯಲ್ಲಿ ಪಂಚರ ಸಹಿ ನಮೂದು ಇರುವುದಿಲ್ಲ ಎಂದರೆ ಸರಿ. ಘಟನಾ ಸ್ಥಳದಲ್ಲಿ ವಿದ್ಯುತ್ ಕಂಬ ಇತ್ತು ಹಾಗೂ ಜೀಪಿನ ಬೆಳಕಿನ

ಸಹಾಯದಿಂದ ಮಹಜರು ಕ್ರಮ ಜರುಗಿಸಿರುತ್ತೇನೆ. ನಿಪಿ.4 ರ ಛಾಯಾಚಿತ್ರವನ್ನು ವಿದ್ಯುತ್ ಕಂಬ ಕಾಣಿಸುತ್ತಿಲ್ಲ ಎಂದರೆ ಸರಿ.

ನಿಪಿ.3 ರ ಮಹಜರಿನಲ್ಲಿರುವ ನಕಾಶೆಯಲ್ಲಿ ಸೇತುವೆ ತೋರಿಸಿದ್ದು, ಸದರಿ ಸೇತುವೆಯು ನಿಪಿ.4 ರ ಛಾಯಾಚಿತ್ರದಲ್ಲಿ ಕಾಣಿಸುತ್ತಿಲ್ಲ ಎಂದರೆ ಸರಿ. ಪಂಚರಾದ ಚಾಸಾ-2 ಮತ್ತು 3 ರವರು ಯಗಟಿ ಗ್ರಾಮದವರಾಗಿರುತ್ತಾರೆ. ಆ ಸಮಯದಲ್ಲಿ ಚಾಸಾ-2 ಮತ್ತು 3 ರವರು ಮಾತ್ರ ಅಲ್ಲಿ ಇದ್ದರು, ಬೇರೆ ಯಾರು ಓಡಾಡುತ್ತಿರಲಿಲ್ಲ. ಘಟನಾ ಸ್ಥಳವು ಗ್ರಾಮ ರಸ್ತೆಯಾಗಿರುತ್ತದೆ. ಈ ಪ್ರಕರಣಕೋಸ್ಕರ ಮತ್ತು ಠಾಣಾ ಅಂಕಿ-ಅಂಶಗಳಿಗೋಸ್ಕರ ನಿಪಿ.1 ರ ನೋಟೀಸು, ನಿಪಿ.2 ರ ವರದಿಯನ್ನು ಹಾಗೂ ನಿಪಿ.3 ರ ಮಹಜರು ಹಾಗೂ ನಿಪಿ.4 ರ ಛಾಯಾಚಿತ್ರವನ್ನು ಸೃಷ್ಠಿಸಲಾಗಿರುತ್ತದೆ ಎಂದರೆ ಸರಿಯಲ್ಲ. ನಿಪಿ.3 ರ ಮಹಜರಿನಲ್ಲಿ ವಶಪಡಿಸಿಕೊಂಡ ಮುದ್ದೆಮಾಲಿನ ಅಂತಿಮ ದಿನಾಂಕವನ್ನು ನಮೂದಿಸಿರುವುದಿಲ್ಲ ಎಂದರೆ ಸರಿ. ನಿಪಿ.3 ರ ಮಹಜರಿನಲ್ಲಿ ಸದರಿ ಅಂಶಗಳನ್ನು ನಮೂದು ಮಾಡಲು ತೊಂದರೆ ಇರಲಿಲ್ಲ. ಮುದ್ದೆಮಾಲಿಗೂ, ಆರೋಪಿಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಸುಳ್ಳು ಪ್ರಕರಣವನ್ನು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ.

ಸದರಿ ದಿನದಂದು ಆರೋಪಿಯು ಯಾವ ಬಟ್ಟೆಯನ್ನು ಧರಿಸಿದ್ದನು ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಆರೋಪಿಯು ನಮ್ಮನ್ನು ನೋಡಿ ಸುಮಾರು 20 ಅಡಿ ದೂರದಿಂದ ಓಡಿಹೋಗಲು ಪ್ರಯತ್ನಿಸಿರುತ್ತಾನೆ. ಆರೋಪಿಯ ಮುಂದೆ ಬೇನಾಮಿ ಮುದ್ದೆಮಾಲನ್ನು ಇಟ್ಟು ನಿಪಿ.4 ರ ಛಾಯಾಚಿತ್ರವನ್ನು ತೆಗೆಯಲಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

sd/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

ಜೆಎಂಎಫ್‌ಸಿ, ಕಡೂರು